# OFFICE OF THE DEPUTY DIRECTOR OF PUBLIC INSTRUCTIONS, DHARWAD

## FORM NO- IX

See Sub Rule (3) of rule 6

## REGISTRATION CERTIFICATE FOR RECOGNISED EDUCATIONAL INSTITUTIONS EXISTING AT THE COMMENCEMENT OF THE ACT.

SL.NO: 01/2013-14

Certified that A.R.C Foundation Bangalore (Specify the name & address of the local authority Society or trust as case may be) governing has been running the following course at the commencement of the Karnataka Educatio Act 1983 (Karnataka Act No. 1 of 1995)

| SL.NO. | Course/class of educational institution | In take | Name & address of the Recognising Authority | Recognition Order No & Date | Standards permitted | Medium of Instruction |
|---|---|---|---|---|---|---|
| 1 | Smt Leelavati.R Charantimath Public School Charantimath Garden Mangalwar peth Dharwad | 50 | DDPI | [illegible] 2013-14 [illegible] 15-11.2013 | 1st 1<br>2nd 1<br>3rd 1<br>4th 1<br>5th 1<br>6th 1<br>7th 1 | English Medium |

This certificate is issued this Friday day of December of Two thousand thirteen

This Institution Is registered as SL.No- 01 of page No- 2 of volume No 01 of Register of educational institution maintained in this office.

PLACE: DHARWAD

DATE: 20.12.2013

To
Secretary
A.R.C Foundation
Charantimath Garden Dharwad.

Deputy Director of Public
Instruction (Admn)
Dharwad
20/12

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ, ಧಾರವಾಡ

ಶಿಕ್ಷಣದಲ್ಲಿನ ಎಲ್ಲರ ಉತ್ಸಾಹ,
ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ

**ಉಪನಿರ್ದೇಶಕರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ,ಧಾರವಾಡ**

ಸಂಖ್ಯೆ:ಜಿ3/ಖಾಪ್ರೌಶಾ/ಮಾ.ನ./ಸಿಆರ್/2013-14 ದಿನಾಂಕ: 15-11-2013

ವಿಷಯ:-ಶ್ರೀಮತಿ ಲೀಲಾವತಿ ಚರಂತಿಮಠ ಪಬ್ಲಿಕ್ ಆಂಗ್ಲ ಮಾಧ್ಯಮ ಶಾಲೆ ಚರಂತಿಮಠ ಗಾರ್ಡನ್ ಧಾರವಾಡ ಈ ಶಾಲೆಗೆ 2013-14 ನೇ ಸಾಲಿನಿಂದ ಪ್ರಥಮ ಮಾನ್ಯತೆ ಆದೇಶ ನೀಡುವ ಕುರಿತು.

ಉಲ್ಲೇಖ;-2)ಕ್ಷೇತ್ರ ಶಿಕ್ಷಣಾಧಿಕಾರಿಗಳು ಧಾರವಾಡ ಶಹರ ವಲಯ ಇವರ ಪತ್ರ ಸಂಖ್ಯೆ ಸಿ3:ಖಾಪ್ರೌಶಾ: ಮಾನ:2013-14 ದಿನಾಂಕ :21-1-2013 ಈ ಕಚೇರಿಯಲ್ಲಿ ಸ್ವೀಕೃತಿ 26-9-2013

****

**ಪೀಠಿಕೆ:-**

ಮೇಲಿನ ವಿಷಯಕ್ಕೆ ಸಂಭಂಧಿಸಿದಂತೆ ಉಲ್ಲೇಖಿತ ಪತ್ರದನ್ವಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಧಾರವಾಡ ಶಹರ ವಲಯ ಇವರು ಈ ಕಚೇರಿಗೆ ಪ್ರಸ್ತಾವನೆ ಸಲ್ಲಿಸಿ ಸಿದ್ಧಗಣೇಶ ಎಜುಕೇಶನ್ ಸೊಸೈಟಿ ಬೆಂಗಳೂರ ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಚರಂತಿಮಠ ಅಕಾಡೆಮಿ ಆಂಗ್ಲ ಮಾಧ್ಯಮ ಶಾಲೆ ಮಂಗಳವಾರ ಪೇಠ ಧಾರವಾಡ ಈ ಶಾಲೆಯನ್ನು ಎ.ಆರ್.ಸಿ.ಫೌಂಡೇಶನ್ ಬೆಂಗಳೂರ ಈ ಸಂಸ್ಥೆಗೆ ಹಸ್ತಾಂತರಿಸಲು ಮತ್ತು ಸದರ ಶಾಲೆಯ ಹೆಸರನ್ನು ಶ್ರೀಮತಿ ಲೀಲಾವತಿ ಚರಂತಿಮಠ ಪಬ್ಲಿಕ್ ಆಂಗ್ಲ ಮಾಧ್ಯಮ ಶಾಲೆ ಚರಂತಿಮಠ ಗಾರ್ಡನ್ ಧಾರವಾಡ ಎಂದು ಮರು ನಾಮಕರಣ ಮಾಡಲು ಸರ್ಕಾರದ ಆದೇಶ ಸಂಖ್ಯೆ ಇಡಿ:169:ಪಿ.ಜಿ.ಸಿ:2013:ದಿನಾಂಕ 26-2-2013 ರನ್ವಯ ಅನುಮತಿ ನೀಡಲಾಗಿದೆ. ಈ ಶಾಲೆಯಲ್ಲಿ 1 ರಿಂದ 7 ನೇ ತರಗತಿಯವರೆಗೆ ವರ್ಗಗಳು ನಡೆಯುತ್ತಿವೆ.ಈ ಶಾಲೆಗೆ 2013-14 ನೇ ಸಾಲಿನಿಂದ ಪ್ರಥಮ ಮಾನ್ಯತೆ ಆದೇಶ ನೀಡುವ ಕುರಿತು ಸೂಕ್ತ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಶಾಲೆಯಲ್ಲಿ ಮೂಲಭೂತ ಸೌಲಭ್ಯಗಳನ್ನು ಹೊಂದಿದ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೌಲ್ಯಾಂಕನ ಪಟ್ಟಿ-1 ನ್ನು ಸಲ್ಲಿಸಿದ್ದು 100 ಕ್ಕೆ 84 ಅಂಕ ನೀಡಿದ ವರದಿ ಸಲ್ಲಿಸಿದ್ದಾರೆ. ಕಾರಣ ಈ ಕುರಿತು ಪ್ರಥಮ ಮಾನ್ಯತೆ ನೀಡುವ ಬಗ್ಗೆ ಈ ಕೆಳಕಂಡಂತೆ ಆದೇಶಿಸಿದೆ.

**-:ಆದೇಶ:-**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಸದರ ಪ್ರಸ್ತಾವನೆ ಪರಿಶೀಲಿಸಲಾಗಿ, ಸದರಿ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ, ಮೂಲಭೂತ ಸೌಲಭ್ಯಗಳ ಕುರಿತು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಸಂದರ್ಶನ ವರದಿಯಲ್ಲ ವಿವರಿಸಿದ್ದಾರೆ. ಸದರ ವರದಿಯಲ್ಲಿ 1 ರಿಂದ 7 ನೇ ತರಗತಿಯನ್ನು ಆಂಗ್ಲ ಮಾಧ್ಯಮದಲ್ಲಿ ನಡೆಸುತ್ತಿದ್ದು ಒಟ್ಟು 7 ಅನುದಾನ ರಹಿತ ವಿಭಾಗಗಳನ್ನು ಹೊಂದಿದೆ. ಕಾರಣ ಶ್ರೀಮತಿ ಲೀಲಾವತಿ ಚರಂತಿಮಠ ಪಬ್ಲಿಕ್ ಆಂಗ್ಲ ಮಾಧ್ಯಮ ಶಾಲೆ ಚರಂತಿಮಠ ಗಾರ್ಡನ್ ಧಾರವಾಡ ಸದರ ಶಾಲೆಗೆ ಪ್ರಥಮ ಮಾನ್ಯತೆಯನ್ನು 2013-14 ನೇ ಸಾಲಿನಿಂದ ಪರಿಷ್ಕೃತವಾಗಿ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಆದೇಶಿಸಿದೆ.

| ತರಗತಿ | 1 | 2 | 3 | 4 | 5 | 6 | 7 | ಒಟ್ಟು ವಿಭಾಗಗಳು 07 ಅನುದಾನರಹಿತ ವಿಭಾಗಗಳು |
|---|---|---|---|---|---|---|---|---|
| ವಿಭಾಗಗಳು | 1 | 1 | 1 | 1 | 1 | 1 | 1 | |
| ಮಾಧ್ಯಮ | ಆಂಗ್ಲ ಮಾಧ್ಯಮ | | | | | | | |

**ಷರತ್ತುಗಳು:**

1 ಶಾಲೆಯ ಆಡಳಿತ ಮಂಡಳಿಯ ಪದಾಧಿಕಾರಗಳ ಪಟ್ಟಿಯನ್ನು ನೊಂದಣಿ ಅಧಿಕಾರಿಗಳಿಂದ ಅಥವಾ ಜಿಲ್ಲಾ ಸತ್ರ ನ್ಯಾಯಾಲಯದಿಂದ ಧೃಢೀಕರಿಸಿದ ಪ್ರತಿಯನ್ನು 15 ದಿವಸದೊಳಗಾಗಿ ಸಲ್ಲಿಸತಕ್ಕದ್ದು.

2. ಸ್ಥಿರ ನಿಧಿಯ ಹಣದ ಅವಧಿ ಮುಗಿದಿದ್ದಲ್ಲಿ ಅದನ್ನು ಉಪನಿರ್ದೇಶಕರ ಮತ್ತು ಆಡಳಿತ ಮಂಡಳಿ ಅಧ್ಯಕ್ಷರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿ ಮರು ನವೀಕರಿಸತಕ್ಕದ್ದು.

3 ವಿಧ್ಯಾರ್ಥಿಗಳ ಧಾಖಲಾತಿ ಹಾಜರಾತಿ ಸರ್ಕಾರದ ಆದೇಶ ದಿ 02-02-2000 ರಂತೆ ಇರತಕ್ಕದ್ದು.

4. ವಿದ್ಯಾರ್ಥಿಗಳ ಪ್ರವೇಶ ಧಾಖಲಾತೆಯಲ್ಲಿ ಮೀಸಲಾತಿ ಕಾಯ್ದುಕೊಳ್ಳತಕ್ಕದ್ದು.

5. ಸಿಬ್ಬಂದಿಗಳ ನೇಮಕಾತಿಯಲ್ಲಿ ಮೀಸಲಾತಿ ಪಾಲಿಸತಕ್ಕದ್ದು.

6. ಖಜಾನೆಗೆ ಭರಣಾ ಮಾಡಬೇಕಾದ ಫೀ ಹಣವನ್ನು ನಿಗದಿತ ಅವಧಿಯಲ್ಲಿ ಭರಣಾ ಮಾಡಬೇಕು.

7. ಶಾಲೆಗೆ ಅವಶ್ಯವಿರುವಂತಹ ಮೂಲಭೂತ ಸೌಕರ್ಯಗಳು,ಸ್ವಂತ ಕಟ್ಟಡ, ಆಟದ ಮೈದಾನ,ಪಾಠೋಪಕರಣ, ಪೀಠೋಪಕರಣ, ಪೂರೈಸತಕ್ಕದ್ದು.

8. ಕರ್ನಾಟಕ ಶಿಕ್ಷಣ ಮಸೂದೆ ಅಡಿಯಲ್ಲಿಯ ನಿಭಂದನೆಗಳನ್ನು ಹಾಗೂ ಇಲಾಖೆ ಸುತ್ತೋಲೆಗಳನ್ನು ಮತ್ತು ಆದೇಶಗಳನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.

9. ಶಿಕ್ಷಣ ಮಸೂದೆ ನಿಯಮ 33 ರನ್ವಯ ಶಾಲಾ ನೊಂದಣಿ ಪ್ರಮಾಣ ಪತ್ರವನ್ನು ಪಡೆದುಕೊಳ್ಳದೇ ಹೋದಲ್ಲಿ ಕೂಡಲೇ ಪ್ರಸ್ತಾವನೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಶಾಲಾ ನೊಂದಣಿಗಾಗಿ ಸಲ್ಲಿಸುವದು.

10. ಆಡಳಿತ ಮಂಡಳಿಯು ಇಲಾಖಾ ನಿಗದಿತ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಕ ಮಾಡಿಕೊಳ್ಳಬೇಕು

11. ವಿದ್ಯಾರ್ಥಿ ದಾಖಲಾತಿಯು ತೀರಾ ಕಡಿಮೆ ಇದ್ದು ಪ್ರಸಕ್ತ ಸಾಲಿಗೆ ವಿನಾಯತಿ ನೀಡಿದೆ ಮುಂದಿನ ಶೈಕ್ಷಣಿಕ ವರ್ಷಗಳಿಗೆ ಅಂದರೆ 2014-15 ನೇ ಸಾಲಿಗೆ ಕಡ್ಡಾಯವಾಗಿ ದಾಖಲಾತಿ ಹಾಜರಾತಿ ಹೆಚ್ಚಿಸಿಕೊಳ್ಳುವದಾಗಿ ರೂ 20 ಛಾಪಾ ಕಾಗದದಲ್ಲಿ ಮುಚ್ಚಳಿಕೆ ನೀಡುವದು.

12 ಶಾಲೆಯಲ್ಲಿ ಕಡ್ಡಾಯವಾಗಿ ಅಗ್ನಿ ನಂದಕ ಅಳವಡಿಸಬೇಕು.

13 ಆರ್.ಟಿ. ಇ. ಕಾಯ್ದೆಯಡಿಯಲ್ಲಿ ಶಾಲೆಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಆಡಳಿತ ಮಂಡಳಿಯು ಕಡ್ಡಾಯವಾಗಿ ಒದಗಿಸತಕ್ಕದ್ದು.

14. ಕ್ಷೇತ್ರ ಶಿಕ್ಷಣಾಧಿಕಾರಿಗಳು ಧಾರವಾಡ ಶಹರ ಇವರು 'ಸಕಾಲ' ಅರ್ಜಿ ಸಂಖ್ಯೆಇಡಿ:099-00000-46145 ದಿನಾಂಕ 25-9--2013 ರಲ್ಲಿ ಸಲ್ಲಿಸಿದ ಪ್ರಸ್ಥಾವನೆಯಲ್ಲಿ ಯಾವದೇ ಮಾಹಿತಿಯು ಕ್ರಮಬದ್ಧವಿಲ್ಲದಿದ್ದಲ್ಲಿ ಅದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಗಳೇ ಹೊಣೆಗಾರರಾಗುತ್ತಾರೆ. ಅಲ್ಲದೆ. ಈ ಅದೇಶ ತನ್ನಿಂದತಾನೆ ರದ್ದಾಗುತ್ತದೆ

16. ಸದರ ಶಾಲೆಯು ಸ್ಥಳಾಂತರ ಮತ್ತು ಹಸ್ತಾಂತರ ಹೊಂದಿದ ಶಾಲೆಯಾಗಿದ್ದು ಇಲಾಖೆಯ ನಿಯಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು ಮಾನ್ಯತೆ ನವೀಕರಣಕ್ಕೆ ಸಂಬಂದಿಸಿದಂತೆ ಯಾವದಾದರೂ ಕ್ರಮಬದ್ದವಲ್ಲದ ದಾಖಲೆಗಳನ್ನು ಸಲ್ಲಿಸಿ ಮಾನ್ಯತೆ ಪಡೆದಲ್ಲಿ ಈ ಆದೇಶವು ತನ್ನಿಂದ ತಾನೆ ರದ್ದಾಗುತ್ತದೆ.

ಈ ಕುರಿತು ಏನಾದರೂ ತಕರಾರು ಬಂದಲ್ಲಿ ಮತ್ತು ಮೇಲಿನ ಕರಾರುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶವನ್ನು ಮರಳಿ ಪಡೆಯುವ ಅಧಿಕಾರ ಈ ಕಾರ್ಯಾಲಯವು ಹೊಂದಿರುತ್ತದೆ.

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಧಾರವಾಡ

ಗೆ:
ಮುಖ್ಯೋಪಾಧ್ಯಾಯರು ಶ್ರೀಮತಿ ಲೀಲಾವತಿ ಚರಂತಿಮಠ ಪಬ್ಲಿಕ್ ಆಂಗ್ಲ ಮಾಧ್ಯಮ ಶಾಲೆ ಚರಂತಿಮಠ ಗಾರ್ಡನ್ ಧಾರವಾಡ ಕ್ಷೇತ್ರ ಶಿಕ್ಷಣಾಧಿಕಾರಿಗಳು ಧಾರವಾಡ ಶಹರ ವಲಯ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.